**ಓ.ಎಸ್ ನಂ. 134/2021**

**ಪಿ. ಡಬ್ಲ್ಯೂಃ 1**

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 27-06-2025 ರಂದು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ ಪಿ ಟಿ ನ್ಯಾಯವಾದಿರವರಿಂದಃ**

ಅಧಿಕಾರ ಪತ್ರವನ್ನು ನಾನು 2021 ರಲ್ಲಿ ಪಡೆದುಕೊಂಡಿರುತ್ತೇನೆ. ನನ್ನ ತಂದೆಯು 2021 ನೇ ಸಾಲಿನಲ್ಲಿ ನನಗೆ ಅಧಿಕಾರ ಪತ್ರವನ್ನು ನೀಡಿದ ಸಮಯದಲ್ಲಿ ಅವರು ದಾವಾ ಆಸ್ತಿಯ ಮಾಲೀಕರು ಆಗಿರಲಿಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಗಳಲ್ಲಿ ನನ್ನ ತಂದೆಯ ಹೆಸರು ನನಗೆ ಜಿಪಿಎ ಕೊಡುವ ಕಾಲಕ್ಕೆ ದಾಖಲು ಇರಲಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಗರಸಭೆಯ ದಾಖಲೆಗಳಲ್ಲಿ

ದಾವಾ ಆಸ್ತಿಯ ಮನೆಯ ಮಾಲಿಕತ್ವವು ನನ್ನ ತಂದೆಯ ತಾಯಿಯ ಹೆಸರು ನಮೂದು ಆಗಿದ್ದು , ಪಹಣಿ ಪತ್ರದಲ್ಲಿ ಯಾರೋ ಬೇರೆ ಹೆಸರು ಇರುವುದನ್ನು ಗಮನಿಸಿರುತ್ತೇನೆ ಎಂದು ಸಾಕ್ಷ್ಯನುಡಿಯುತ್ತಾರೆ.

1983-84 ರಲ್ಲಿ ನನ್ನ ತಂದೆಯು ಮಹಾರಾಷ್ಟ್ರಕ್ಕೆ ವಲಸೆ ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಕೆಲಸ ಮಾಡುವ ಉದ್ದೇಶಕ್ಕಾಗಿ ಮಹಾರಾಷ್ಟ್ರಕ್ಕೆ ತೆರಳಿದ್ದರು ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರಿಯರು ಮಹಾರಾಷ್ಟ್ರದಲ್ಲಿ ಜನಿಸಿರುತ್ತೇವೆ ಎಂದರೆ ಸರಿ. ನನ್ನ ತಂದೆಯು ಖಾಸಗಿ ಕಂಪನಿಯಲ್ಲಿ ಸುಮಾರು 35 -36 ವರ್ಷಗಳ ಕಾಲ ಕೆಲಸವನ್ನು ಮಾಡಿ ಸಧ್ಯಕ್ಕೆ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆಗೆ ಪೂಣೆಯಲ್ಲಿ ಮೂರು ಮನೆ ಮತ್ತು ವಾಸ್ಕೋದಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಪೂಣೆಯಲ್ಲಿ ಒಂದು ಮನೆ ಮಾತ್ರ ಇರುತ್ತದೆ ಎಂದು ಸಾಕ್ಷಿಯು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯನ್ನು ನನ್ನ ಅಜ್ಜ ಗಣಪತಿ ಪೆಡ್ಣೇಕರ ಇವರು ಖರೀದಿ ಮಾಡಿರಬಹುದು.

ಸರ್ವೆ ನಂ.39*6 ರಲ್ಲಿ ಕಠಿಣಕೋಣ ಸುಂಕೇರಿ ಗ್ರಾಮದಲ್ಲಿ 2 ಗುಂಟೆ ವಿಸ್ತೀರ್ಣದ ಆಸ್ತಿ ಇದ್ದು ಅದರಲ್ಲಿ ನಮ್ಮ ಪಿತ್ರಾರ್ಜಿತ ಮನೆ ಇರುತ್ತದೆ. ಕಿನ್ನರ ಸರ್ಕಲ ಕಡವಾಡ ಗ್ರಾಮದ ಸರ್ವೆ ನಂ.261/ಎ - ಸುಮಾರು 8 ಎಕರೆ 7 ಆಣೆ ಇದು ಶೇತ್ಕಿ ಜಮೀನು ಇರುತ್ತದೆ. ನಾನು ಎರಡೂ ಆಸ್ತಿಗಳನ್ನು ನೋಡಿರುತ್ತೇನೆ. ನಮ್ಮ ಪಿತ್ರಾರ್ಜಿತ ಮನೆ ಇರುವ ಆಸ್ತಿಯ ಪಶ್ಚಿಮಕ್ಕೆ ಕಾಳಿ ನದಿ ಸಮೀಪ ಹೋಗುವ ರಸ್ತೆ, ಪೂರ್ವ ಮತ್ತು ಉತ್ತರಕ್ಕೆ ಮನೆ, ಹಾಗೂ ದಕ್ಷಿಣಕ್ಕೆ ಒಂದು ಸಣ್ಣ ರಸ್ತೆ ಇರುತ್ತದೆ. ಶೇತ್ಕಿ ಜಮೀನಿನ ಪೂರ್ವಕ್ಕೆ ರೈಲ್ವೆ ಹಳಿ ಮತ್ತು ಸುತ್ತಲೂ ಕಾಳಿ ನದಿಯ ಹಿನ್ನೀರು ಇರುತ್ತದೆ. ಸದರಿ ಆಸ್ತಿಗೆ ದೋಣಿ ಮೂಲಕ ಹೋಗುತ್ತೇವೆ. ನನ್ನ ತಂದೆಯು ಪೂಣೆಯಲ್ಲಿ ಕೆಲಸ ಮಾಡುತ್ತಿದ್ದಾಗ ದಾವಾ ಆಸ್ತಿಯನ್ನು ನೋಡಲು ಯಾರೂ ಇರಲಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನ್ನ ಅಜ್ಜ ಅಜ್ಜಿ ಮತ್ತು ಮಾವಂದಿರು ಇದ್ದರು ಅಲ್ಲದೇ ನನ್ನ ತಂದೆಯೂ ಸಹ ಪೂಣೆಯಿಂದ ಬಂದು ಹೋಗಿ ಮಾಡುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ಪಿತ್ರಾರ್ಜಿತ ಮನೆಯು ಈಗಲೂ ಇದ್ದು , ಅದನ್ನು ನನ್ನ ಮಾವಂದಿರು ನವೀಕರಣ ಮಾಡಿರುತ್ತಾರೆ. ಈ ಹಿಂದೆ ನಮ್ಮ ಪಿತ್ರಾರ್ಜಿತ ಮನೆಯ ಮಹಡಿ ಹಂಚಿನದು ಇತ್ತು ಎಂದರೆ ಸರಿ. ಅಂದಾಜು ಸುಮಾರು 2005 ನೇ ಸಾಲಿನಲ್ಲಿ ಪಿತ್ರಾರ್ಜಿತ ಮನೆಯನ್ನು ನವೀಕರಣ ಮಾಡಿದ್ದು , ಅದಕ್ಕೆ ಕೊಠಡಿಗಳನ್ನು ಸೇರಿಸಲಾಗಿರುತ್ತದೆ. 2005 ನೇ ಸಾಲಿನಲ್ಲಿ ಮನೆಯನ್ನು ನವೀಕರಣ ಮಾಡಿದ್ದು , ಅದು ಎರಡು ಮಹಡಿಗಳನ್ನು ಹೊಂದಿದ್ದು , ನನ್ನ ತಂದೆಯನ್ನು ಸೇರಿ ನನ್ನ ಅಜ್ಜನ ಎಲ್ಲಾ ಮಕ್ಕಳು ಸದರಿ ಮನೆಯನ್ನು ನವೀಕರಣ ಮಾಡಿರುತ್ತಾರೆ. ನನ್ನ ತಂದೆಯ ಸಹೋದರನಾದ ಮೃತ ಸುರೇಶ ಗಣಪತಿ ಪೆಡ್ಣೇಕರ ಇವರಿಗೆ

ಸದರಿ ಮನೆಯ ನಿರ್ಮಾಣವನ್ನು ನೋಡಲು ಜವಾಬ್ದಾರಿಯನ್ನು ನೀಡಲಾಗಿತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಮನೆಯ ನಿರ್ಮಾಣ ವೆಚ್ಚವನ್ನು ನನ್ನ ತಂದೆ ಮತ್ತು ಅವರ ಎಲ್ಲ ಸಹೋದರರು ಸಮಾನವಾಗಿ ಭರಿಸಿದ್ದು , ನಿರ್ಧಿಷ್ಟವಾಗಿ ನನ್ನ ತಂದೆ ಎಷ್ಟು ಹಣವನ್ನು ಪಾವತಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿರುವುದಿಲ್ಲಾ. ಒಂದು ವೇಳೆ ನನ್ನ ತಂದೆಯು ಹಣವನ್ನು ಪಾವತಿ ಮಾಡಿರುತ್ತಿದ್ದರೆ ಎಷ್ಟು ಹಣ ಪಾವತಿ ಮಾಡಿದ್ದರೆಂದು ನನಗೆ ನಿರ್ಧಿಷ್ಟವಾಗಿ ಹೇಳಬಹುದಿತ್ತು, ಆದರೆ ನನ್ನ ತಂದೆ ಹಣವನ್ನು ಮನೆ ನಿರ್ಮಾಣಕ್ಕಾಗಿ ನೀಡದೇ ಇರುವುದರಿಂದ ನನಗೆ ಎಷ್ಟು ಹಣ ನೀಡಿದ್ದಾರೆಂದು ಹೇಳಲು ಬರುವುದಿಲ್ಲಾ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನಿರ್ಮಾಣ ಮಾಡಲು ತಗುಲಿದ ಎಲ್ಲಾ ವೆಚ್ಚವನ್ನು ನನ್ನ ತಂದೆಯ ಸಹೋದರನಾದ ಮೃತ ಸುರೇಶ ಗಣಪತಿ ಪೆಡ್ನೇಕರ ಇವರೇ ಭರಿಸಿರುತ್ತಾರೆಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ತಂದೆ ಹಾಗೂ ಎಲ್ಲಾ ಸಹೋದರರು ದಾವಾ ಆಸ್ತಿಗಳಲ್ಲಿರುವ ತಮ್ಮ ಹಕ್ಕನ್ನು ಮೃತ ಸುರೇಶ ಗಣಪತಿ ಪೆಡ್ನೇಕರ ಇವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. 2017 ನೇ ಸಾಲಿನಲ್ಲಿ ಸದರಿ ಮನೆಯು ಪೂರ್ಣಗೊಂಡಿರುತ್ತದೆಂದರೆ ಸರಿಯಲ್ಲ.

ಸದರಿ ಮನೆಯ ಮೊದಲನೇ ಮಹಡಿಯನ್ನು ಮೃತ ಸುರೇಶ ಗಣಪತಿ ಪೆಡ್ನೇಕರ ಇವರಿಗೆ ಬಿಟ್ಟುಕೊಡಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮೃತ ಸುರೇಶ ಗಣಪತಿ ಪೆಡ್ನೇಕರ ಇವರು ಮುಂಬೈನಲ್ಲಿ ವಾಸವಾಗಿದ್ದು, ಊರಿಗೆ ಬರುವಸಮಯದಲ್ಲಿ ತನಗೆ ಮೇಲಿನ ಮಹಡಿಯಲ್ಲಿ ಒಂದು ಕೊಠಡಿಯನ್ನು ಉಳಿದುಕೊಳ್ಳಲು ಕೇಳಿದ್ದು, ಮಾನವೀಯತೆ ಮೇರೆಗೆ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಿ ಮುಂದೂಡಲಾಯಿತು)**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**